## ಕಾವೇರಿ ಪ್ರಾಧಿಕಾರ ವಿವಾದ: ಜು. 1ರಂದು ಸಮಾಲೋಚನೆ

(1ನೇ ಪುಟದಿಂದ)

"ಇದುವರೆಗೆ ಕೆಲಸ ಮಾಡದಿರುವವರು ಈಗ ನೆಪ ಹುಡುಕಿ ತಕರಾರು ತೆಗೆಯುತ್ತಿದ್ದಾರೆ. ಇವರು ಅಧಿಕಾರದಲ್ಲಿ ಇದ್ದಾಗ ಏಕೆ ಕೆಲಸ ಮಾಡಲಿಲ್ಲ? ನಾವು ಬಂದ ಮೇಲೆ ಕಾಮಗಾರಿಗೆ ಚಾಲನೆ ನೀಡಬೇಕಾಯಿತಲ್ಲವೆ?" ಎಂದು ಅವರು ಪ್ರಶ್ನಿಸಿದರು.

ಹಾಗಿದ್ದರೆ ಈ ಕಾಮಗಾರಿಯ ಬಗ್ಗೆ ತನಿಖೆ ನಡೆಸುವ ಅಗತ್ಯವೇನಿತ್ತು ಎಂಬ ಪ್ರಶ್ನೆಗೆ ಅವರು ಉತ್ತರಿಸಿದ್ದು:

"ಈ ಕಾಮಗಾರಿಯ ಬಗ್ಗೆ ತನಿಖೆ ನಡೆಯುತ್ತಿಲ್ಲ."

918 ಕೋಟಿ ರೂಪಾಯಿ ವೆಚ್ಚದ ತುಮಕೂರು ಮತ್ತು ನಾಗಮಂಗಲ ನಾಲೆಗೆ ನಾವು 450 ಕೋಟಿ ರೂಪಾಯಿ ವೆಚ್ಚ ಮಾಡಿದ್ದೇವೆ. ಜುಲೈ ಎರಡನೆ ವಾರ ಈ ನಾಲೆಗಳಲ್ಲಿ ನೀರು ಬಿಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಿದ್ದೇವೆ ಎಂದು ನಾಗೇಗೌಡ ತಿಳಿಸಿದರು.

## ಚುನಾವಣೆಗೆ ಲಾಲೂ ನಿಷ್ಠರ ಬಹಿಷ್ಕಾರ



ರಾಷ್ಟ್ರೀಯ ಪುರಸ್ಕಾರ ಪಡೆದ ವಿದ್ವಾಂಸ ಪಂಡಿತ ರಂಗನಾಥ ಶರ್ಮರಿಗೆ ಪುರುಷೋತ್ತಮ ಶಾಸ್ತ್ರಿ ಸ್ಮಾರಕ ಪ್ರಶಸ್ತಿ ಸಮಾರಂಭದಲ್ಲಿ ನಿವೃತ್ತ ನ್ಯಾಯಮೂರ್ತಿ ಇ.ಎಸ್. ವೆಂಕಟರಾಮಯ್ಯ ಅವರಿಂದ ಸನ್ಮಾನ. ಪಕ್ಕದಲ್ಲಿ ಪುರುಷೋತ್ತಮ ಶಾಸ್ತ್ರಿ ಸ್ಮಾರಕ ಪ್ರತಿಷ್ಠಾನದ ಮುಖ್ಯಸ್ಥರಾದ ಎಂ.ಪಿ.ಎಲ್. ಶಾಸ್ತ್ರಿ.